# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 202 |
| ಉತ್ತರಿಸ ಬೇಕಾದ ದಿನಾಂಕ: | 14.02.2024 |
| ಸದಸ್ಯರ ಹೆಸರು: | ಶ್ರೀ ಮುನಿರಾಜು ಗೌಡ ಪಿ. ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಮಾನ್ಯ ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| 1 | ಉಪ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ ಕಂದಾಯ ಭೂಮಿಯು ನೋಂದಣೆಯಾದ ನಂತರ ಬರುವ ಜೆ.ಸ್ಲಿಪ್‌ಗಳನ್ನು ಖಾತೆ ಮಾಡುವ ಪ್ರಕ್ರಿಯೆಯ ಸಂಪೂರ್ಣ ವಿವರ ನೀಡುವುದು: | ಉಪ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ ಕಂದಾಯ ಭೂಮಿಯ ನೋಂದಣೆಯಾದ ನಂತರ ಹಳೆಯ ವಿಧಾನದಲ್ಲಿ ಸ್ವೀಕೃತವಾಗುವ 25 ನಮೂನೆಗಳಿಗೆ ಸಂಬಂಧಿಸಿದಂತೆ ಭೂಮಿ ಆಪರೇಟರ್ ಅರ್ಜಿ ನಮೂದಿಸಿ, ಡಾಟಾ ಎಂಟ್ರಿ ಮಾಡಿದ ನಂತರ ಶಿರಸ್ತೇದಾರರ ನೋಟೀಸು ಸದರಿ ಅರ್ಜಿಗೆ ಅನುಮೋದನೆಯ ನಂತರ ನೋಟೀಸು ಸೃಜನೆಯಾಗುತ್ತದೆ.<br>ಉಪನೋಂದಣಾದಿಕಾರಿಗಳ ಕಛೇರಿಯಿಂದ ಹೊಸ ವಿಧಾನದಲ್ಲಿ ಸ್ವೀಕೃತವಾಗುವ ಜೆ-ನಮೂನೆಗಳಿಗೆ ಸಂಬಂಧಿಸಿದಂತೆ ಭೂಮಿ ತಂತ್ರಾಂಶದಲ್ಲಿ ನೇರವಾಗಿ Autogen ಮೂಲಕ ನಮೂನೆ-12 ಹಾಗೂ ನಮೂನೆ-21 ಸೃಜನೆಗೊಳ್ಳುತ್ತದೆ.<br>ಸದರಿ ನೋಂದಾಯಿತ ಜೆ-ನಮೂನೆಗಳ ನೋಟೀಸು ಅವಧಿ 7 ದಿನ ಆಗಿದ್ದು, 11-ಇ ನಕ್ಷೆ ಇರದ ಪ್ರಕರಣಗಳು 8 ನೇ ದಿನಕ್ಕೆ ಅಪರೇಟರ್ ಲಾಗಿನ್ ನಲ್ಲಿ ಖಾತಾ ನಂಬರ್ ಮತ್ತು ಬೆಳೆ ವಿವರ ನಮೂದಿಸಿದ ನಂತರ ಸಂಬಂಧಪಟ್ಟ ರಾಜಸ್ವ ನಿರೀಕ್ಷಕರವರ ಲಾಗಿನ್‌ನಲ್ಲಿ ಮ್ಯುಟೇಷನ್ ಅನುಮೋದನೆ/ತಿರಸ್ಕಾರಗೊಳ್ಳುತ್ತದೆ. (ಸಂದರ್ಭಾನುಸಾರ)<br>11-ಇ ನಕ್ಷೆ ಇರುವ ಪ್ರಕರಣಗಳು ಸಂಯೋಜಿತ ಪೋಡಿ ಮ್ಯುಟೇಷನ್ (IMP) ಪ್ರಕ್ರಿಯೆಗೆ ಒಳಗೊಳ್ಳುವುದರಿಂದ ರಾಜಸ್ವ ನಿರೀಕ್ಷಕರವರ ಲಾಗಿನ್ ನಲ್ಲಿ ತಾತ್ವಿಕ ಅನುಮೋದನೆಗೊಂಡು ಸರ್ವೆ ಸೂಪರ್ ವೈಸರ್ ಲಾಗಿನ್ ನಲ್ಲಿ ಹಿಸ್ಸಾ ಪೋಡಿಯಾದ ನಂತರ ಸಂಬಂಧಪಟ್ಟ ರಾಜಸ್ವನಿರೀಕ್ಷಕರ ಲಾಗಿನ್ ನಲ್ಲಿ ಅಂತಿಮ ಅನುಮೋದನೆಯಾಗಿ ಪಹಣಿ ಸೃಜನೆಯಾಗುತ್ತದೆ. (FLOW CHART) **ಅನುಬಂಧ-1** ರಲ್ಲಿ ನೀಡಿದೆ. |
| 2 | ಉಪ ನೋಂದಣಾಧಿಕಾರಿಗಳ ಕಾರ್ಯಾಲಯದಿಂದ ಬಂದ ಜೆ.ಸ್ಲಿಪ್ ತಿರಸ್ಕರಿಸಲು ಇರುವ ಪ್ರಕ್ರಿಯೆ ವಿವರ ನೀಡುವುದು. ಯಾವ ಸಂದರ್ಭಗಳಲ್ಲಿ ಮ್ಯುಟೇಷನ್ ತಿರಸ್ಕರಿಸಬಹುದು, ಈ ಬಗ್ಗೆ ಖರೀದಿದಾರರಿಗೆ ನೋಟೀಸ್ ಅಥವಾ ಮಾಹಿತಿ ನೀಡುವುದು ಕಡ್ಡಾಯವಿದೆಯೇ; | ಕಾವೇರಿ ತಂತ್ರಾಂಶದ ಮೂಲಕ ಹಳೆಯ ವಿಧಾನದಲ್ಲಿ ಸ್ವೀಕೃತವಾದ ಜೆ-ಸ್ಲಿಪ್ ತಿರಸ್ಕರಿಸುವ ಪ್ರಕ್ರಿಯೆ ಈ ಕೆಳಗಿನಂತಿದೆ:<br>• ಕಾವೇರಿ ತಂತ್ರಾಂಶದ ಮೂಲಕ ಹಳೆಯ ವಿಧಾನದಲ್ಲಿ ಜೆ-ನಮೂನೆ ಸ್ವೀಕೃತಿ<br>• ಭೂಮಿ ಅಪರೇಟರ್ ಲಾಗಿನ್‌ನಲ್ಲಿ ಜೆ ನಮೂನೆ ತಿರಸ್ಕರಿಸಲು ಕಾರಣ ನಮೂದಿಸಿ ಶಿರಸ್ತೇದಾರರ ಲಾಗಿನ್‌ಗೆ ವರ್ಗಾಯಿಸುವುದು. |

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| | | • ಶಿರಸ್ತೇದಾರರ ಲಾಗಿನ್‌ನಲ್ಲಿ ಜೆ ನಮೂನೆ ತಿರಸ್ಕರಿಸುವುದು.<br>• ಹಿಂಬರಹ ಸೃಜನೆ.<br><br>ಉಪ ನೋಂದಾಣಾಧಿಕಾರಿಗಳ ಕಾರ್ಯಾಲಯದಿಂದ ಹಳೆಯ ವಿಧಾನದಲ್ಲಿ ಸ್ವೀಕೃತವಾಗುವ ಜೆಸ್ಲಿಪ್ ಗಳನ್ನು ಮ್ಯುಟೇಷನ್ ಪೂರ್ವದಲ್ಲಿ ಕೆಳಕಂಡ ಕಾರಣಗಳಿಗಾಗಿ ಶಿರಸ್ತೇದಾರರು ತಿರಸ್ಕರಿಸಲು ಅವಕಾಶವಿರುತ್ತದೆ.<br><br>1. 11 ಇ ನಕ್ಷೆ ಇಲ್ಲದ ಪ್ರಕರಣಗಳು;<br>2. ಜೆ ಸ್ಲಿಪ್ ಹಾಗೂ ದಸ್ತಾವೇಜಿನಲ್ಲಿ ವಿಸ್ತೀರ್ಣ ಅಥವಾ ಖಾತೆದಾರರ ಹೆಸರು ವ್ಯತ್ಯಾಸವಾಗಿರುವ ಪ್ರಕರಣಗಳು;<br>3. ಸರ್ವೆ ಸಂಖ್ಯೆ ಇಲ್ಲದಿರುವುದು;<br>4. ಜಂಟಿ ಖಾತೆದಾರರು ಹಕ್ಕು ಬದಲಾವಣೆ ಮಾಡದಿರುವುದು.<br><br>ಕಾವೇರಿ ತಂತ್ರಾಂಶದ ಮೂಲಕ ಹೊಸ ವಿಧಾನದಲ್ಲಿ ಸ್ವೀಕೃತವಾದ ಜೆ-ಸ್ಲಿಪ್‌ಗಳು ನೇರವಾಗಿ ನೋಟೀಸು ಹಂತಕ್ಕೆ ಬರುವುದರಿಂದ ಸದರಿ ಜೆ-ಸ್ಲಿಪ್‌ಗಳನ್ನು ತಿರಸ್ಕರಿಸಲು ಅವಕಾಶವಿರುವುದಿಲ್ಲ. ಆದರೆ ರಾಜಸ್ವ ನಿರೀಕ್ಷಕರು ಮ್ಯುಟೇಷನ್ ಹಂತದಲ್ಲಿ ಸಂದರ್ಭಾನುಸಾರ ತಿರಸ್ಕರಿಸಲು ಅವಕಾಶವಿರುತ್ತದೆ. ಯಾವ ಸಂದರ್ಭಗಳಲ್ಲಿ ಮ್ಯುಟೇಷನ್ ತಿರಸ್ಕರಿಸಲಾಗುವುದು ಎಂಬ ಬಗ್ಗೆ ವಿವರವನ್ನು **ಅನುಬಂಧ -2** ರಲ್ಲಿ ನೀಡಲಾಗಿದೆ.<br>ಈ ಬಗ್ಗೆ ಖರೀದಿದಾರರಿಗೆ ನೋಟೀಸ್ ಅಥವಾ ಮಾಹಿತಿ ನೀಡುವುದು ಕಡ್ಡಾಯವಾಗಿರುತ್ತದೆ. |
| 3 | 2022 ಮತ್ತು 2023 ರಲ್ಲಿ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕಿನಲ್ಲಿ ಮ್ಯುಟೇಷನ್ ಗಾಗಿ ಬಂದ ಎಷ್ಟು ಜೆ-ಸ್ಲಿಪ್‌ಗಳನ್ನು ತಿರಸ್ಕರಿಸಲಾಗಿದೆ; ಪ್ರತಿ ಪ್ರಕರಣಕ್ಕೂ ಪ್ರತ್ಯೇಕವಾಗಿ ಕಾರಣ ನೀಡುವುದು? | 2022-23 ನೇ ಸಾಲಿನ ಆನೇಕಲ್ ತಾಲ್ಲೂಕಿನ ತಿರಸ್ಕೃತಗೊಂಡ ಜೆ-ಸ್ಲಿಪ್ ಸಂಖ್ಯೆ 3498, ಪ್ರಮುಖ ಕಾರಣಗಳು ಈ ಕೆಳಕಂಡಂತಿರುತ್ತವೆ:<br><br>1. ಬಹುತೇಕ ಪ್ರಕರಣಗಳು 11-ಇ ನಕ್ಷೆ ಇಲ್ಲದ ಕಾರಣ ತಿರಸ್ಕೃತವಾಗಿರುತ್ತವೆ;<br>2. ಉಳಿದ ಪ್ರಕರಣಗಳು ಜೆ-ನಮೂನೆಯಲ್ಲಿರುವ ಹಕ್ಕು ಬದಲಾವಣೆ ವಿವರ ಮತ್ತು ಲಗತ್ತು ದಸ್ತಾವೇಜಿನಲ್ಲಿರುವ ವಿವರಗಳು ಪರಸ್ಪರ ತಾಳೆ ಇರದ ಕಾರಣಕ್ಕೆ ಹಕ್ಕು ಬದಲಾವಣೆ ಅಂಗೀಕಾರವಾಗಿರುವುದಿಲ್ಲ;<br>3. ವಿಲ್‌ಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಹಕ್ಕು ಸಂಬಂಧ ನೀಡಲಾಗುವ ಜಮೀನಿನ ವಿವರಗಳಲ್ಲಿ ಸರ್ವೆ ಸಂಖ್ಯೆಗಳನ್ನು ಹಾಕದ್ದೆ, |

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಕಟ್ಟಡ ಸಂಖ್ಯೆಗಳನ್ನು ನಮೂದಿಸಿರುವುದರಿಂದ ಬಹುತೇಕ ಜೆ-ಸ್ಲಿಪ್ ಗಳು ತಿರಸ್ಕೃತವಾಗಿರುತ್ತವೆ. |
| 4 | 2022 ಮತ್ತು 2023 ರಲ್ಲಿ ಮ್ಯುಟೇಷನ್ ತಿರಸ್ಕರಿಸಲು ಪ್ರತಿ ಖರೀದಿದಾರರಿಗೂ ನೀಡಿರುವ ನೋಟೀಸ್ ಪ್ರತಿಯನ್ನು ನೀಡುವುದು: | 1. 2022-2023ರ ಸಾಲಿನಲ್ಲಿ 11-ಇ ನಕ್ಷೆ ಇಲ್ಲದ ನೊಂದಾಯಿತ ದಾಖಲೆಗಳನ್ನು ಭೂಮಿ ತಂತ್ರಾಂಶದಲ್ಲಿ Download ಮಾಡಿಕೊಳ್ಳಲು ರಹ ಇಲ್ಲದ ಕಾರಣ ಸದರಿಯವರನ್ನು ಗುರುತಿಸಿ ನೋಟೀಸ್ ನೀಡಲು ಸಾಧ್ಯವಾಗಿರುವುದಿಲ್ಲ.<br>2. 2022-23 ರ ಸಾಲಿನಲ್ಲಿ ಉಪನೋಂದಾಣಿಧಿಕಾರಿ ಕಛೇರಿಗಳಲ್ಲಿ 11-ಇ ನಕ್ಷೆ ಇಲ್ಲದ ನೋಂದಣೆ ಮಾಡಿದ್ದು ಸದರಿ ನೊಂದಾಯಿತ (ಭೌತಿಕ ಪ್ರತಿಗಳನ್ನು) ಪತ್ರಗಳನ್ನು ತಾಲ್ಲೂಕು ಕಛೇರಿಗೆ ನೀಡಿರುವುದಿಲ್ಲ. ಈ ಕಾರಣದಿಂದ ಖರೀದಿದಾರರ ವಿಳಾಸ ಪತ್ತೆಯಾಗದಿರುವುದರಿಂದ ನೋಟಿಸುಗಳನ್ನು ಖರೀದಿದಾರರಿಗೆ ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಹಾಗೂ ಸದರಿ ನೋಟಿಸುಗಳನ್ನು ನಿಯಮಾನುಸಾರ ಗ್ರಾಮ ಚಾವಡಿಗಳಲ್ಲಿ ಪ್ರಚುರ ಪಡಿಸಲಾಗುತ್ತದೆ. |
| 5 | ಉದ್ದೇಶ ಪೂರ್ವಕವಾಗಿ ಜೆ-ಸ್ಲಿಪ್ ತಿರಸ್ಕರಿಸುವ ಮೂಲಕ ಖಾತೆ ಬದಲಾವಣೆಯನ್ನು ವಿಳಂಬ ಮಾಡುತ್ತಿರುವ ಮತ್ತು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ತೆರಳುವಂತೆ ಮಾಡುವ ಸಿಬ್ಬಂದಿಯ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು? | ಮಾನ್ಯ ನ್ಯಾಯಾಲಯಗಳ ತಡೆಯಾಜ್ಞೆ ನಮೂದಾಗಿರುವ ಪ್ರಕರಣಗಳು, 11-ಇ ನಕ್ಷೆ ಇಲ್ಲದ ಪ್ರಕರಣಗಳು, ವಿಸ್ತೀರ್ಣ ಅಥವಾ ಖಾತೆದಾರರ ಹೆಸರು ವ್ಯತ್ಯಾಸದ ಪ್ರಕಥಣಗಳನ್ನು ಹೊರತುಪಡಿಸಿ ಉದ್ದೇಶ ಪೂರ್ವಕವಾಗಿ ತಿರಸ್ಕರಿಸಿರುವುದಿಲ್ಲ. |

ಕಂಇ 33 ಎಂಆರ್ಆರ್ 2024


(ಕೃಷ್ಣ ಬೈರೇಗೌಡ)
**ಕಂದಾಯ ಸಚಿವರು**

ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ. ೨೦೨೪ಕ್ಕೆ

ಅನುಬಂಧ-1

---

# Bhoomi - Work Flow for Registered - Non Dispute Mutation



54317/2024 ಕರ್ನಾಟಕ ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 202 ಕ್ಕೆ

ಅನುಬಂಧ-2

1. ಮ್ಯುಟೇಶನ್ ಗೆ ತಕರಾರು ಸ್ವೀಕೃತವಾಗಿರುವುದು.

2. ಜಮೀನಿನ ಮಾಲೀಕರ ಹೆಸರಿನಲ್ಲಿ ಖೊಟ್ಟಿ ದಸ್ತಾವೇಜು ನೋಂದಾಯಿಸಲಾಗಿದೆ.

3. ಜನರಲ್ ಪವರ್ ಆಫ್ ಅಟಾರ್ನಿ ನೋಂದಾಯಿಸಿರುವುದಿಲ್ಲ,

4. ಜಮೀನು ವಿಕ್ರಯಿಸಲು ಜನರಲ್ ಪವರ್ ಆಫ್ ಆಟಾರ್ನಿಯಲ್ಲಿ ಅನುಮತಿಸಿರುವುದಿಲ್ಲ.

5. ಜಮೀನು ಮುಖ್ಯ ಸ್ವಾಧೀನದಾರರ ಜೊತೆಗೆ ಜಂಟಿ ಸ್ವಾಧೀನದಾರರೂ ಇದ್ದು, ದಸ್ತಾವೇಜಿನಲ್ಲಿ ಜಂಟಿ ಸ್ವಾಧೀನದಾರರು ಮಾತ್ರವೇ ಸಹಿ ಮಾಡಿದ್ದಾರೆ, ಮುಖ್ಯ ಸ್ವಾಧೀನದಾರರು ಸಹಿ ಮಾಡಿಲ್ಲ.

6. ಜಮೀನು ಪರಭಾರೆ ಮಾಡದಂತೆ ಸಿವಿಲ್ ನ್ಯಾಯಾಲಯದ ತಡೆಯಾಜ್ಞೆ ಇದೆ.

7. ಕ್ರಯ ಪತ್ರ ನೊಂದಾಯಿಸಿ ಕೊಟ್ಟಿರುವ ವ್ಯಕ್ತಿಯ ಹೆಸರು ಪಹಣಿಯಲ್ಲಿ ಇರುವುದಿಲ್ಲ.

8. ವಹಿವಾಟಿನಲ್ಲಿ ಸೇರಿರುವ ಜಮೀನು ಜನರಲ್ ಪವರ್ ಆಫ್ ಅಟಾರ್ನಿಯಲ್ಲಿನ ತಪಶೀಲಿನಲ್ಲಿ ಇರುವುದಿಲ್ಲ.

9. ಪೌತಿ/ವಾರಸಾ ವಹಿವಾಟಿನಲ್ಲಿ ಕುಟುಂಬಕ್ಕೆ ಹೊರತಾದ ಅನಧಿಕೃತ ವ್ಯಕ್ತಿಯೊಬ್ಬರನ್ನು/ವ್ಯಕ್ತಿಗಳನ್ನು ಸೇರಿಸಲಾಗಿದೆ.

10. ಸರ್ಕಾರಿ ಜಮೀನಿನಲ್ಲಿನ ಭೂ ಮಂಜೂರಿ/ಮರುಮಂಜೂರಿ/ಸಕ್ರಮೀಕರಣ/ಅಧಿಭೋಗದಾರಿಕೆ/ಖಾಯಂಗೊಳಿಸುವಿಕೆ ಅದೇಶವು ಖೊಟ್ಟಿ ಅಥವಾ ಸೃಷ್ಟಿಸಲಾದದ್ದೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ.

11. ಜಮೀನಿನ ಮಾರುಕಟ್ಟೆ ಮೌಲ್ಯವು ಒಂದು ನೂರು ರೂಪಾಯಿಗಳಿಗಿಂತ ಕಡಿಮೆಯಿದೆಯೆಂದು ಹೇಳಿ ಮುದ್ರಾಂಕ ಶುಲ್ಕ ಹಾಗೂ ನೋಂದಾವಣೆ ತಪ್ಪಿಸಲಾಗಿದೆ.

12. ನೋಂದಾಯಿಸಿಲ್ಲದ (ಜುಬಾನಿ) ಹಿಸ್ಸಾ ಪತ್ರ- ಮುದ್ರಾಂಕ ಶುಲ್ಕ ಪಾವತಿಸಿಲ್ಲ.

13. ಪೌತಿ/ವಾರಸಾ/ವಿಲ್ ಆಧಾರಿತ ಮ್ಯುಟೇಶನ್ ಜಮೀನಿನ ಮುಖ್ಯ ಸ್ವಾಧೀನದಾರರ ಮರಣ ಪ್ರಮಾಣಪತ್ರ ಸಲ್ಲಿಸಿರುವುದಿಲ್ಲ.

14. ವಹಿವಾಟಿನಲ್ಲಿ ಒಳಗೊಂಡಿರುವ ಜಮೀನುಗಳು ಕರ್ನಾಟಕ (ಕೆಲವು ನಿರ್ಧಿಷ್ಟ ಜಮೀನುಗಳ ಪರಭಾರೆ ನಿಷೇಧ) ಕಾಯಿದೆ 1978 ರ ವ್ಯಾಪ್ತಿಗೆ ಒಳಪಡುತ್ತದೆ.

15. ಜಮೀನು ಮಂಜೂರಿ ಸಮಯದಲ್ಲಿ ವಿಧಿಸಲಾದ ಪರಭಾರೆ ನಿಷೇಧ ಅವಧಿಯು ಮುಕ್ತಾಯವಾಗಿರುವುದಿಲ್ಲ.

16. ಹಕ್ಕು ಖುಲಾಸೆ ಪತ್ರ ನೋಂದಾಯಿಸಿರುವುದಿಲ್ಲ.

17. ವಹಿವಾಟಿನಲ್ಲಿ ಒಳಗೊಂಡಿರುವ ಜಮೀನು ಇನಾಂ ರದ್ದಿಯಾತಿ ಕಾಯಿದೆಗೆ ಒಳಪಟ್ಟಿದೆ-ಮರುಮಂಜೂರು ಆಗಿರುವುದಿಲ್ಲ.

18. ಜಮೀನು ಮುಖ್ಯ ಸ್ವಾಧೀನದಾರರ ಕೋರಿಕೆ ಮೇರೆಗೆ ಈ ಆಧಾರ/ಬಿಡುಗಡೆ ವಹಿವಾಟನ್ನು ತಿರಸ್ಕರಿಸಿದೆ

19. ಮಂಜೂರಾದ ಮನೆ ನಿವೇಶನದಲ್ಲಿ ಹಕ್ಕು ಪಡೆದವರು ವಾಸವಿರುವುದಿಲ್ಲ. ಮ್ಯುಟೇಷನ್ ಅಂಗೀಕರಿಸಿಲ್ಲ.

20. ಭೂಮಿ ಮಂಜೂರಾತಿ ಜಮೀನಾಗಿದೆ. ಮಾರಾಟ ಪೂರ್ವ ಅನುಮತಿ ಹಾಜರುಪಡಿಸಿಲ್ಲ.

21. ಭೂ ನ್ಯಾಯ ಮಂಡಳಿ ಮಂಜೂರಾತಿ ಜಮೀನಾಗಿದೆ. ಅವಧಿ ಪೂರ್ವ ಪರಭಾರೆಯಾಗಿದೆ. ಮ್ಯುಟೇಷನ್ ಅಂಗೀಕರಿಸಿಲ್ಲ.

22. ಹಕ್ಕು ಪತ್ರದ ದೃಢೀಕೃತ ನಕಲು ಹಾಜರುಪಡಿಸಿಲ್ಲ

23. ಸಿಟಿ ಸರ್ವೆ ಪ್ರಾರಂಭವಾಗಿರುವುದರಿಂದ ಮತ್ತು ಇನ್ನು ಮುಂದೆ ಪ್ರಾಪರ್ಟಿ ಕಾರ್ಡು ನೀಡಲಿರುವುದರಿಂದ ಅಪಾರ್ಟ್ ಮೆಂಟ್ ಖರೀದಿದಾರರು ಹೊಂದಿದ ಜಮೀನಿನ ಮೇಲಿನ ಅವಿಭಾಜ್ಯ ಅಂಶದ ಹಕ್ಕು ಪಹಣಿಯಲ್ಲಿ ದಾಖಲೆ ಮಾಡಲು ಅವಕಾಶವಿಲ್ಲ.

24. ಜೆ-ನಮೂನೆಯಲ್ಲಿರುವ ಹಕ್ಕು ಬದಲಾವಣೆ ವಿವರ ಮತ್ತು ಲಗತ್ತು ದಸ್ತಾವೇಜಿನಲ್ಲಿರುವ ವಿವರಗಳು ಪರಸ್ಪರ ತಾಳೆ ಇರದ ಕಾರಣಕ್ಕೆ ಹಕ್ಕು ಬದಲಾವಣೆ ಅಂಗೀಕರಿಸುತ್ತಿಲ್ಲ.

25. ವೀಲುನಾಮೆ ಪ್ರಕರಣಗಳಲ್ಲಿ ಹಕ್ಕು ಸಂಬಂಧ ಜಮೀನಿನ ವಿವರಗಳನ್ನು ಕಟ್ಟಡ ನಂಬ್ರದಲ್ಲಿ ಗುರುತಿಸಿರುತ್ತಾರೆ. ವಹಿವಾಟಿನ ವರದಿ ತಯಾರಾಗಿದೆ. ಕಂದಾಯ ನಿರೀಕ್ಷಕರು ವೀಲುನಾಮೆಯಲ್ಲಿ ಸರ್ವೆ ನಂಬರ್ ದಾಖಲೆ ಇಲ್ಲ.

26. ಫ್ರಾಕ್ಸಿ ಚೆಕ್ ಲಿಸ್ಟ್/ ವಹಿವಾಟಿನ ವರದಿ ತಯಾರಾಗಿದೆ.